ಪ್ರ-330 (18)

**ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ನಿಯಮ 330ರ ಅಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ.**

---

**ಪ್ರಶ್ನೆ** **ಬಿ.ಟಿ.ಎಂ. 4ನೇ ಹಂತ, 2ನೇ ಬ್ಲಾಕ್, ವಾರ್ಡ್ ನಂ. 188ರಲ್ಲಿ ಭಾರತ ಸರ್ಕಾರದ ಅಧೀನದಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಿ.ಎ.ನಿವೇಶನ 12/1 ಹಂಚಿಕೆಯಾಗಿದ್ದು, ಸ್ಥಳೀಯ ಭೂಗಳ್ಳರ ಪರವಾಗಿ ಯಾವುದೇ ಆದೇಶ/ದಾಖಲಾತಿ ಇಲ್ಲದಿದ್ದರೂ ಸಹ ಸ್ಥಳೀಯ ಪೊಲೀಸ್ ಅಧಿಕಾರಿಗಳ ರಕ್ಷಣೆ ಪಡೆದು ಸರ್ಕಾರಿ ಜಮೀನನ್ನು ಕಬಳಿಸುವ ಸಲುವಾಗಿ ಏಕಾಏಕಿ ದಿನಾಂಕ:23.10.2020 ರಂದು ಭೂಗಳ್ಳರು ದಾಳಿ ನಡೆಸಿ, ಕಾಂಪೌಂಡನ್ನು ಕೆಡವಿ ಸಿ.ಸಿ. ಕ್ಯಾಮರಾಗಳನ್ನು ಹೊಡೆದುಹಾಕಿ, ಅತಿಕ್ರಮಣ ಪ್ರವೇಶ ಮಾಡಿ ಕಾಮಗಾರಿಗೆ ಅಡ್ಡಿ ಉಂಟು ಪಡಿಸಿರುತ್ತಾರೆ. ಈ ಸಂಬಂಧ ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಪೊಲೀಸ್ ಭೂಗಳ್ಳರ ಪರವಾಗಿಯೇ ಕಾರ್ಯನಿರ್ವಹಿಸುತ್ತಿದ್ದಾರೆ. ಇದರಿಂದಾಗಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗೆ ನಷ್ಟ ಉಂಟಾಗಿದ್ದು, ಸಾರ್ವಜನಿಕ ಹಿತಾಸಕ್ತಿಯ ಹಿನ್ನಲೆಯಲ್ಲಿ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.**

**ಉತ್ತರ:** ಶ್ರೀ ಪ್ರಶಾಂತ ಬಿನ್ ಪ್ರತಾಪ್ 33 ವರ್ಷ, ಅಸಿಸ್ಟಂಟ್ ಮ್ಯಾನೇಜರ್, ಇಂಡಿಯನ್ ಆಯಿಲ್ ಕಾರ್ಪೋರೇಷನ್ ಪ್ರೈ.ಲಿ. ನಂ.29. ಪಿ. ಕಾಳಿಂಗರಾವ್ ರಸ್ತೆ, ರಿಚ್‌ಮಂಡ್ ಸರ್ಕಲ್, ಬೆಂಗಳೂರು ನಗರ ರವರು ದಿನಾಂಕ:31-10-2020 ರಂದು ಠಾಣೆಗೆ ಬಂದು ಅರಕೆರೆ ಬಿ.ಡಿ.ಎ ಲೇಔಟ್‌ನಲ್ಲಿರುವ ಸಿ.ಎ ಸೈಟ್ ನಂ.12/1 ರಲ್ಲಿ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಪ್ರೈ.ಲಿ. ವತಿಯಿಂದ ಸದರಿ ಜಾಗದಲ್ಲಿ ಪೆಟ್ರೋಲ್ ಬಂಕ್ ನಿರ್ಮಿಸಲು ಜಾಗವನ್ನು ಭೋಗ್ಯಕ್ಕೆ ಪಡೆದು ಸುತ್ತಲು ಶೀಟ್‌ನಲ್ಲಿ ಕಾಂಪೌಂಡ್ ಗೋಡೆಯನ್ನು ಕಟ್ಟಿ ಸೈಟಿನ ಒಳಗಡೆ ಕಂಪನಿಯ ಕೆಲಸ ಮಾಡಿಸುತ್ತಿದ್ದು, ದಿನಾಂಕ:30-10-2020 ರಂದು ಮಧ್ಯಾಹ್ನ 12-00 ಗಂಟೆ ಸಮಯದಲ್ಲಿ ಕೆಲವು ಅಪರಿಚಿತ ದುಷ್ಕರ್ಮಿಗಳು ಅತಿಕ್ರಮ ಪ್ರವೇಶ ಮಾಡಿ ಸೈಟಿನಲ್ಲಿ ನಿರ್ಮಿಸಿದ್ದ ಶೀಟುಗಳು, ಕಾಂಪೌಂಡ್ ಗೋಡೆಯನ್ನು ನೆಲಸಮ ಮಾಡಿ ಕಂಪನಿಗೆ 20 ಲಕ್ಷ ರೂಗಳಷ್ಟು ನಷ್ಟವನ್ನುಂಟು ಮಾಡಿರುತ್ತಾರೆ. ಸದರಿ ಅಪರಿಚಿತ ದುಷ್ಕರ್ಮಿಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಲು ನೀಡಿದ ದೂರಿನ ಮೇರೆಗೆ ಹುಳಿಮಾವು ಪೊಲೀಸ್ ಠಾಣೆಯ ಮೊ.ಸಂ. 203/2020 ಕಲಂ 427, 447 ರೆ/ವಿ 34 ಐಪಿಸಿ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತದೆ.

ಈ ಪ್ರಕರಣದ ತನಿಖಾ ಕಾಲದಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾದ ಶ್ರೀ ಮಹಾರುದ್ರಮೂರ್ತಿ ರವರನ್ನು ಕೂಲಂಕಷವಾಗಿ ವಿಚಾರಣೆ ಮಾಡಲಾಗಿ ಇವರು ಐ.ಓ.ಸಿ.ಗೆ ಸಂಬಂಧಿತ ಸ್ವತ್ತಿನಲ್ಲಿ ಕಾರ್ಮಿಕರಿಂದ ಕೆಲಸ ಮಾಡಿಸುತ್ತಿದ್ದಾಗ ಅರಕೆರೆ ವಾಸಿ ಸುನೀಲ್ ಎಂಬುವರು ಅವರ ಜನರೊಡನೆ ಸದರಿ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿ ರೂಫಿಂಗ್ ಶೀಟ್‌ನ್ನು ಕಿತ್ತುಹಾಕಿ ನಷ್ಟಪಡಿಸಿದರೆಂದು ತಿಳಿಸಿರುತ್ತಾರೆ.

ಈ ಪ್ರಕರಣದ ತನಿಖಾ ಕಾಲದಲ್ಲಿ ಆರೋಪಿತ ಸುನಿಲ್ ಕುಮಾರ್ ಬಿನ್ ಕೃಷ್ಣಪ್ಪ, 34 ವರ್ಷ ವಾಸ:ನಂ.197, ದೊಡ್ಡಮನೆ ಕೃಷ್ಣಪ್ಪ ಲೇಔಟ್, ಅರಕೆರೆ, ಬಿ.ಜಿ. ರಸ್ತೆ, ಬೆಂಗಳೂರು ನಗರ ಈತನನ್ನು ದಿನಾಂಕ:03-12-2020 ರಂದು ದಸ್ತಗಿರಿ ಮಾಡಿ ಕಾನೂನು ರೀತಿ ಕ್ರಮ ಕೈಗೊಂಡಿರುತ್ತದೆ. ದೂರುದಾರರು ನೀಡಿದ ದೂರಿನ ಮೇರೆಗೆ ಪ್ರಕರಣವನ್ನು ದಾಖಲಿಸಿ, ನಿಷ್ಪಕ್ಷಪಾತವಾಗಿ ಕಾನೂನು ರೀತ್ಯಾ ಕ್ರಮ ಕೈಗೊಂಡಿದ್ದು, ಸದರಿ ಪ್ರಕರಣವು ಹಾಲಿ ತನಿಖೆಯಲ್ಲಿರುತ್ತದೆ.

---

**ಹೆಚ್‌ಡಿ 452 ಎಸ್‌ಎಸ್‌ಟಿ 2020**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು